**ಬಾಂಗ್ಲಾದೇಶದ ಸುಟ್ಟಗಾಯ ಸಂತ್ರಸ್ತರಿಗೆ ತುರ್ತು ವೈದ್ಯಕೀಯ ನೆರವು**

ಜುಲೈ 22, 2025

2025 ಜುಲೈ 21 ರಂದು, ಢಾಕಾದಲ್ಲಿ ಸಂಭವಿಸಿದ ವಿಮಾನ ಅಪಘಾತದಲ್ಲಿ ಮೃತಪಟ್ಟವರಿಗೆ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಸಂತಾಪ ವ್ಯಕ್ತಪಡಿಸಿದ್ದರು ಹಾಗೂ ಬೆಂಬಲ ಮತ್ತು ಸಹಾಯದ ಭರವಸೆ ನೀಡಿದ್ದರು.

2. ಅದರಂತೆ ಸಂತ್ರಸ್ತರಿಗೆ ಚಿಕಿತ್ಸೆ ನೀಡಲು ಸುಟ್ಟಗಾಯಗಳ ತಜ್ಞ ವೈದ್ಯರು ಮತ್ತು ದಾದಿಯರ ತಂಡವು ಅಗತ್ಯ ವೈದ್ಯಕೀಯ ನೆರವುಗಳೊಂದಿಗೆ ಶೀಘ್ರದಲ್ಲೇ ಢಾಕಾಗೆ ಭೇಟಿ ನೀಡಲಿದೆ. ಅವರು ಹೆಚ್ಚಿನ ಚಿಕಿತ್ಸೆ ಮತ್ತು ವಿಶೇಷ ಆರೈಕೆಗಾಗಿ ಭಾರತಕ್ಕೆ ಶಿಫಾರಸು ಹೊಂದಿರುವ ರೋಗಿಗಳ ಸ್ಥಿತಿಯ ಮೌಲ್ಯಮಾಪನವನ್ನು ಮಾಡುತ್ತಾರೆ.  ಅವರ ಪ್ರಾಥಮಿಕ ಮೌಲ್ಯಮಾಪನ ಮತ್ತು ಅಗತ್ಯವಿರುವ ಚಿಕಿತ್ಸೆಯ ಆಧಾರದ ಮೇಲೆ ಹೆಚ್ಚುವರಿ ವೈದ್ಯಕೀಯ ತಂಡಗಳು ಕೂಡ ಅನುಸರಿಸಬಹುದು.

ನವ ದೆಹಲಿ

ಜುಲೈ 22, 2025